ಓ.ಎಸ್ ನಂಬರ್ಃ 55/2021 ಪಿ ಡಬ್ಲ್ಯುಃ 1

**<u>ದಿಃ09.02.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ.ಜೆ.ಎಸ್.ಬಿ ವಕೀಲರಿಂದ ಃ</u>**

ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು, ಅದರಲ್ಲಿ ಪ್ರಸ್ತಾಪಿಸಿರುವ ವಿಚಾರಗಳನ್ನು ನಾನೇ ಮಾಹಿತಿ ಕೊಟ್ಟು ಬರೆಸಿರುತ್ತೇನೆ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಒಕ್ಕಣೆಯನ್ನು ಓದಿಸಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸತ್ಯದಿಂದ ಕೂಡಿದೆ ಎಂದು ಮತ್ತು ಅದರಲ್ಲಿ ಇರುವ ಸಹಿ ನನ್ನದಾಗಿರುತ್ತದೆ.

ನನ್ನ ಮುಖ್ಯ ವಿಚಾರಣೆಯ ಪೂರವಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಮಾಡಿದ್ದು ಅದನ್ನು ನೋಡಿ ಗುರುತಿಸಿರುತ್ತೇನೆ.

1. ನಾಲ್ಕು ಆರ್.ಟಿ.ಸಿ ಗಳು ನಿಪಿ.1 ರಿಂದ 4
2. ತಿಳುವಳಿಕೆ ನೋಟೀಸ್ಸಿನ ಕಚೇರಿ ಪ್ರತಿ ನಿಪಿ.5
3. ನಾಲ್ಕು ಅಂಚೆ ರಶೀದಿಗಳು ನಿಪಿ.6 ರಿಂದ 9
4. ಎರಡು ಮರು ಉತ್ತರಗಳು ನಿಪಿ.10 ಮತ್ತು 11
5. ಎರಡು ವಾಪಾಸ್ಸಾದ ಅಂಚೆ ಲಕೋಟೆಗಳು ನಿಪಿ.12 ಮತ್ತು 13 ಅವುಗಳನ್ನು ತೆರೆದು ಅವುಗಳಲ್ಲಿ ಇದ್ದ ನೋಟೀಸ್ಸನ್ನು ನಿಪಿ.12(ಎ) ಮತ್ತು 13(ಎ) ಎಂದು

6. ಎರಡು ಅಂಚೆ ಸ್ವೀಕೃತಿ ಪತ್ರಗಳು ನಿಪಿ.14 ಮತ್ತು 15 ಎಂದು ಗುರುತಿಸಿದ್ದೇನೆ.

ಆದ್ದರಿಂದ ನಾನು ವಾದ ಪತ್ರದಲ್ಲಿ ಕೋರಿದಂತೆ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಬಿ.ಕೆ.ಎಸ್ ವಕೀಲರಿಂದ ಃ**

ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ.

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.